ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2492 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-03-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕರಾವಳಿ ಜಿಲ್ಲೆ & ಬೆಂಗಳೂರು ನಡುವಿನ ಶಿರಾಡಿಘಾಟ್ ಸುರಂಗ ಮಾರ್ಗ ನಿರ್ಮಾಣ ಸರ್ಕಾರದ ಗಮನಕ್ಕೆ ಬಂದಿದೆಯೇ; (ಹಂತವಾರು ವಿವರ ನೀಡುವುದು) | ಬಂದಿದೆ.<br>ಶಿರಾಡಿ ಘಾಟ್ ಬೈಪಾಸ್ ರಸ್ತೆಗಾಗಿ ಸಲಹೆಗಾರರು ರೂ.10145.62 ಕೋಟಿಗಳ ಮೊತ್ತಕ್ಕೆ DPRನ್ನು ತಯಾರಿಸಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಲ್ಲಿಸಿರುತ್ತಾರೆ.<br>ತದನಂತರ ದಿನಾಂಕ:24.04.2018ರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI), ಲೋಕೋಪಯೋಗಿ ಇಲಾಖೆ ಮತ್ತು Consultancy Service ಸಲಹೆಗಾರರೊಂದಿಗೆ ಮಾಡಿಕೊಂಡ ತ್ರಿಪಕ್ಷೀಯ ಒಪ್ಪಂದದಂತೆ (Tripartite Agreement) ಸಲಹೆಗಾರರು ತಯಾರಿಸಿದ ಡಿಪಿಆರ್ ಅನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ಇವರಿಗೆ ಹಸ್ತಾಂತರಿಸಲಾಗಿರುತ್ತದೆ.<br>ಸದರಿ ಯೋಜನೆಯ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯ, ಇವರಿಂದ ರಚಿಸಲಾಯಿತು. ಸದರಿ ತಜ್ಞರ ಸಮಿತಿಯು ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಜೋಡಣೆಯ ಯೋಜನಾ ವೆಚ್ಚವು ಸುರಂಗ ಮಾರ್ಗ ಯೋಜನೆಗಿಂತ ಕಡಿಮೆಯಾಗುವುದರ ಕಾರಣ ಹಾಗೂ ಅರಣ್ಯ ತೆರವುಗೊಳಿಸುವಿಕೆಯು ಕಡಿಮೆಯಾಗುವುದರ ಕಾರಣ ರಾಷ್ಟ್ರೀಯ ಹೆದ್ದಾರಿ ಜೋಡಣೆಯನ್ನು ಅಭಿವೃದ್ಧಿ ಪರವಾಗಿ ವರದಿ ಸಲ್ಲಿಸಿರುತ್ತದೆ.<br>ಅದರಂತೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಜೋಡಣೆಯನ್ನು ಅಭಿವೃದ್ಧಿಪಡಿಸಲು ಮತ್ತು ಯೋಜನಾ ವರದಿಯನ್ನು ತಯಾರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಆ. | ಈ ಸುರಂಗ ಮಾರ್ಗಕ್ಕೆ ಸಮೀಕ್ಷೆ ವರದಿ ತಯಾರಿಸಲಾಗಿದೆಯೇ; ಅಗತ್ಯ ಅನುದಾನವೆಷ್ಟು; ಯಾವ ರೀತಿಯಲ್ಲಿ ಅನುದಾನ ಒದಗಿಸಲಾಗುವುದು; | |
| ಇ. | ಈ ಸುರಂಗ ಮಾರ್ಗದಿಂದ ಸಮಯ ಮತ್ತು ದಾರಿಯ ಉಳಿತಾಯವಾಗುವುದರಿಂದ ವಾಣಿಜ್ಯ ಚಟುವಟಿಕೆಗೆ ಸಹಕಾರಿಯಾಗುವುದರಿಂದ ಈ ಯೋಜನೆಯನ್ನು ಕಾರ್ಯಗತ ಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | |

ಕಡತ ಸಂಖ್ಯೆ: ಲೋಇ 121 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು